
*Long Anticipated Book!*

# "A Concise Encyclopaedia of Hinduism"

## Volume - 4

(Supplement A-Z)

*by Swami Harshananda*




FEATURES

- Covers all aspects of Hindu Religion, Philosophy and Culture
- Printed on natural shade, super quality maplitho paper
- Binding in full calico with multi-colour cover
- Size: Crown quarto (24 x 18 cm)
- Total number of pages: 192
- Contains 37 photographs
- Weight: 765gms

**Price**
**₹ 300**

Postage and packing charges extra

**Note:-**
**"A Concise Encyclopaedia of Hindusim" a set of 3 volumes is also available for ₹ 2000/- (Postage charges extra)**

**Published by:**
**Ramakrishna Math**
**Bull Temple Road**
**Bangalore - 560 019**

**Phone**
Bookstall:080-26616161
Office:080-26613149

**Email**
bookstall@rkmathbangalore.org
rkmfive@gmail.com

# ತಸ್ಮೈ ಶ್ರೀಗುರವೇ ನಮಃ

ಪ್ರಾತಃಕಾಲ. ಇನ್ನೂ ಎಳೆಬಿಸಿಲು ಆಶ್ರಮದ ಗುಡಿಸಲುಗಳ ಮೇಲೆ ಬಿದ್ದಿಲ್ಲ. ಕಾಡಿನ ತುಂಬೆಲ್ಲ ಹಕ್ಕಿಗಳ ನಿನಾದ. ಪಕ್ಕದಲ್ಲಿ ಹರಿಯುತ್ತಿದ್ದ ನದಿಯ ಮಂಜುಳ ನಿನಾದ ಹಿತಕರವಾಗಿ ಕೇಳಿಬರುತ್ತಿದೆ. ಕಿಶೋರ ಬಾಲಕನೊಬ್ಬ ಹಿಂಜರಿಯುತ್ತಲೇ ಅಂಗಳಕ್ಕೆ ಕಾಲಿಟ್ಟ. ಶುಭ್ರ ಬಿಳಿಯ ವಸ್ತ್ರ; ತಲೆಯ ಮೇಲೆ ಕಟ್ಟಿದ ಜಟೆ; ತೇಜಸ್ವೀ ಮುಖ. ಇನ್ನೂ ಎಳೆಯ ವಯಸ್ಸು. ಅವನನ್ನು ನೋಡಿ ಗುಡಿಸಲಿನಿಂದ ಹೊರಬಂದ ಋಷಿಯೊಬ್ಬ ಕೇಳಿದ, "ಯಾರಪ್ಪಾ ನೀನು? ಎಲ್ಲಿಂದ ಬಂದೆ?" ಅದಕ್ಕೆ ಉತ್ತರವಾಗಿ ಹುಡುಗ ಕೈಯಲ್ಲಿದ್ದ ಸಮಿತ್ತುಗಳ ಹೊರೆಯನ್ನು ಗುರುಗಳ ಪಾದಗಳ ಬಳಿ ಇರಿಸಿ, ಸಾಷ್ಟಾಂಗ ನಮಸ್ಕರಿಸಿದ. "ಏಳು ಮಗೂ, ಎದ್ದೇಳು. ಇತ್ತ ಬಾ..." ಎಂದು ಗುರು ಅವನನ್ನು ಗುಡಿಸಲಿನ ಒಳಕ್ಕೆ ಕರೆದೊಯ್ದ. ಶಿಷ್ಯನಿಗೆ ಗುರು ಸಿಕ್ಕಿದ; ಗುರುವಿಗೂ ಶಿಷ್ಯನೊಬ್ಬ ಸಿಕ್ಕಿದ. ಹಳೆಯ ಕಾಲದಲ್ಲಿ ಶಿಷ್ಯ ಗುರುವಿನ ಬಳಿಗೆ ಹೋಗುತ್ತಿದ್ದದು ಹೀಗೆ.

ಭಾರತೀಯ ಪರಂಪರೆಯಲ್ಲಿ ಗುರು–ಶಿಷ್ಯರ ನಡುವಿನ ಸಂಬಂಧ ವಿಶೇಷ ಬಗೆಯದು. ಶಿಷ್ಯನಿಗೆ ಗುರುವೇ ಸರ್ವಸ್ವ. ಅವನೇ ತಾಯಿ, ತಂದೆ, ದೇವರು. ಒಂದು ಪ್ರಸಿದ್ಧ ಗುರು ಸ್ತೋತ್ರದಲ್ಲಿ, **"ಗುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ । ಗುರುಃ ಸಾಕ್ಷಾತ್ ಪರಬ್ರಹ್ಮಃ ತಸ್ಮೈ ಶ್ರೀಗುರವೇ ನಮಃ ॥"** ಎಂದು ಸ್ತುತಿಸಲಾಗಿದೆ. ಬ್ರಹ್ಮ, ವಿಷ್ಣು, ಮಹೇಶ್ವರ ಎಲ್ಲವೂ ಗುರುವೇ; ಸಾಕ್ಷಾತ್ ಪರಬ್ರಹ್ಮವೂ ಗುರುವೇ– ಎನ್ನುವಲ್ಲಿ ಗುರುವೇ ತನ್ನ ಪರಮಗಮ್ಯವಾದ ತತ್ತ್ವ, ಅವನೇ ತನ್ನ ಅಂತಿಮ ಗುರಿ; ಅವನನ್ನು ಬಿಟ್ಟು ಬೇರೇನೂ ಇಲ್ಲ ಎಂಬ ಭಾವನೆಯಿದೆ. ಇದು ಕೇವಲ ಭಾವನೆಯಲ್ಲ; ಉತ್ಪ್ರೇಕ್ಷೆಯಂತೂ ಅಲ್ಲವೇ ಅಲ್ಲ. ಆಧ್ಯಾತ್ಮಿಕವಾಗಿ ಶಿಷ್ಯನು ಗುರುವನ್ನು ಸಾಕ್ಷಾತ್ ದೇವರೆಂದೇ ಕಾಣುತ್ತಾನೆ.

ಗುರುವಿಗೆ ಇಷ್ಟು ಉನ್ನತವಾದ ಸ್ಥಾನವನ್ನು ನೀಡಿ, ಅವನ ಮೇಲೆ ಅಸಾಧಾರಣ ಭಕ್ತಿ, ಗೌರವಗಳನ್ನು ಸಲ್ಲಿಸುವ ಈ ಸಂಪ್ರದಾಯ ನಮ್ಮಲ್ಲಿ ಬೆಳೆದು ಬಂದದ್ದಾದರೂ ಹೇಗೆ? ಅದಕ್ಕೇನಾದರೂ ಕಾರಣವಿದೆಯೆ? ಆಚರಣೆಯ ಮೂಲಕ ಹರಿದು ಬಂದಿರುವ ಈ ಪರಂಪರೆಯ ಮೂಲವನ್ನು ಅರಸಬೇಕಾದರೆ, ಈ ಗುರುಪರಂಪರೆಯ ತಾತ್ತ್ವಿಕ ಹಿನ್ನೆಲೆಯನ್ನು ನಾವು ಗಮನಿಸಬೇಕು.

**ಗುರುತತ್ತ್ವ :** "ಸಚ್ಚಿದಾನಂದನೇ ಗುರು" ಎನ್ನುತ್ತಿದ್ದರು ಶ್ರೀರಾಮಕೃಷ್ಣರು. (*ಶ್ರೀರಾಮಕೃಷ್ಣ ವಚನವೇದ ಭಾಗ ೧, ಪು. ೧೩೭*) ಪರಬ್ರಹ್ಮವಸ್ತು ತನ್ನ ನೈಜಸ್ವರೂಪದಲ್ಲಿ ನಿರ್ಗುಣ–ನಿರಾಕಾರ ಹಾಗೂ ಅವ್ಯಕ್ತವಾದದ್ದು; ಅದನ್ನು ಇಂದ್ರಿಯ, ಮನಸ್ಸು, ಬುದ್ಧಿಗಳು ಗ್ರಹಿಸಲಾರವು; ಮಾತು ವಿವರಿಸಲಾರದು–ಹೀಗೆನ್ನುತ್ತದೆ ವೇದಾಂತ. ಅವ್ಯಕ್ತವಾದ, ಅನಿರ್ವಚನೀಯವಾದ ಬ್ರಹ್ಮವನ್ನು ಕಂಡುಕೊಳ್ಳುವುದಾದರೂ ಹೇಗೆ? ಎಲ್ಲಿ ಮಾತು, ಮನಸ್ಸುಗಳು ಹಿಂದಿರುಗುವವೋ (**"ಯತೋ ವಾಚೋ ನಿವರ್ತಂತೇ । ಅಪ್ರಾಪ್ಯ ಮನಸಾ ಸಹ"** –*ತೈತ್ತಿರೀಯ ಉಪನಿಷತ್ತು, ೨.೯*) ಅಂಥ ಅಗೋಚರ ಸತ್ಯವನ್ನು ತಿಳಿಯುವ ಉಪಾಯವೇನು?

ಇದಕ್ಕೆ ಉಪನಿಷತ್ತುಗಳಲ್ಲಿ ಉತ್ತರವಿದೆ– "ಯಾವ ತತ್ತ್ವವು ತಾನಾಗಿಯೇ ಒಬ್ಬನಿಗೆ ತನ್ನ ಸತ್ಯವನ್ನು ತಿಳಿಸಿಕೊಡುವುದೋ, ಅದು ಅಂಥವನಿಗೆ ಮಾತ್ರ ಲಭ್ಯವಾಗುವುದು". (**'ಯಮೇವೈಷ ವೃಣುತೇ ತೇನ ಲಭ್ಯ'** –*ಕಠೋಪನಿಷತ್, ೧.೨.೨೩*) ಇದರರ್ಥ, ಸ್ವತಃ ಪರಮಾತ್ಮನೇ ತನ್ನ ಸತ್ಯವನ್ನು ತಿಳಿಸಿಕೊಟ್ಟಲ್ಲದೆ ಭಗವಂತನ ಸ್ವರೂಪವು ಮನುಷ್ಯನಿಗೆ ತಿಳಿಯಲಾಗದು. ಹಲವು ಪೌರಾಣಿಕ, ವೈದಿಕ ಕಥೆಗಳಲ್ಲಿ ಕಂಡುಬರುವ ಮಹಾಪುರುಷರು ಭಗವಂತನ ಅವಿರ್ಭಾವವೆಂದೇ ಪರಿಗಣಿಸಲ್ಪಟ್ಟಿದ್ದಾರೆ. ಅಂಥಹವರನ್ನು ಋಷಿ, ಯೋಗಿ, ಅವತಾರ ಎಂದೆಲ್ಲ ಹೇಳಲಾಗಿದೆ. ಇವರ ಉದ್ದೇಶವೇ ಭಗವಂತನ ತತ್ತ್ವವನ್ನು ಜೀವರುಗಳಿಗೆ ತಿಳಿಸಿಕೊಡುವುದು. ಇವರನ್ನೇ ಗುರುವೆಂದು ಸಂಬೋಧಿಸಲಾಗಿದೆ. ಯಾವ ಕಾರಣದಿಂದಲೂ ಗಳಿಸಿಕೊಳ್ಳಲಾಗದ ಆತ್ಯಂತಿಕ ಸತ್ಯವನ್ನು ತಿಳಿಸಿಕೊಡುವುದರಿಂದ, ಆ ಮೂಲಕ ಆಧ್ಯಾತ್ಮಿಕ ರಹಸ್ಯವನ್ನು ಶಿಷ್ಯನಿಗೆ ಬೋಧಿಸುವುದರಿಂದ ಗುರುವನ್ನು ಶಿಷ್ಯನು, **"ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ"** ('ಕಣ್ಣನ್ನು ತೆರೆಸಿದಂತಹ ಗುರುವಿಗೆ ನಮಸ್ಕಾರ') ಎಂದು ಸ್ತುತಿಸುತ್ತಾನೆ. ಅಜ್ಞಾನದ ತೆರೆಯನ್ನು ಸರಿಸಲು ಗುರುವಿನ ಅನುಗ್ರಹವಿಲ್ಲದೆ ಬೇರೆ ಉಪಾಯವಿಲ್ಲ ಎನ್ನುವ ಕಾರಣದಿಂದಾಗಿ ಶಿಷ್ಯನಿಗೆ ಗುರು ಎಲ್ಲಕ್ಕಿಂತಲೂ ಮಿಗಿಲು; ಎಂದೆಂದಿಗೂ ಪೂಜ್ಯನು. ಆದ್ದರಿಂದ ಅವನು ತನ್ನೆಲ್ಲವನ್ನೂ ಗುರುವಿನ ಪಾದಗಳಲ್ಲಿ ಸಮರ್ಪಿಸುತ್ತಾನೆ. ಹೀಗೆ ಇಲ್ಲಿ ಕಂಡುಬರುವ ಎಲ್ಲ ಗೌರವ, ಭಕ್ತಿಗಳ ಮೂಲ ಆಧ್ಯಾತ್ಮಿಕ ತತ್ತ್ವದಲ್ಲೇ ಅಡಗಿದೆ.

**ವಿನಯ–ಮೊದಲ ಅರ್ಹತೆ :** ಶಿಷ್ಯನು ಗುರುವನ್ನರಸಿ ಹೋಗುವಾಗ, ಯಜ್ಞಕ್ಕೆ ಬೇಕಾದ ಸಮಿತ್ತನ್ನು ತೆಗೆದುಕೊಂಡು ಹೋಗಿ, ಗುರುವಿಗೆ ಅರ್ಪಿಸಬೇಕೆಂಬುದು ಸಂಪ್ರದಾಯ. ಅದು ಸಮರ್ಪಣೆಯ ಸಂಕೇತ. ತಾನು ಗುರುಸೇವೆ ಮಾಡುತ್ತ ಅವರಿಗೆ ವಿಧೇಯನಾಗಿದ್ದುಕೊಂಡು ವಿದ್ಯಾರ್ಜನೆ ಮಾಡುತ್ತೇನೆ ಎಂಬ ಭಾವ ಅದರ ಹಿಂದೆ ಅಡಗಿದೆ. ಈ ರೀತಿ ಶಿಷ್ಯನು ತನ್ನ ಎಲ್ಲ ಅಹಂಕಾರ, ಜಂಭ, ಅಭಿಮಾನಗಳನ್ನು ಇಲ್ಲದಾಗಿಸಿ, ವಿನಯದಿಂದ ಗುರುವಿನ ಬಳಿಸಾರಬೇಕು ಎಂದು ಸಂಪ್ರದಾಯ ವಿಧಿಸುತ್ತದೆ. **'ತದ್ವಿದ್ಧಿ ಪ್ರಣಿಪಾತೇನ, ಪರಿಪ್ರಶ್ನೇನ ಸೇವಯಾ'** ('ಈ ಆತ್ಮ ವಿದ್ಯೆಯನ್ನು ಗುರುವಿಗೆ ಶರಣಾಗತನಾಗುವ, ವಿನಯದಿಂದ ಪ್ರಶ್ನಿಸುವ ಹಾಗೂ ಗುರುಸೇವೆ ಮಾಡುವ ಮೂಲಕ ಪಡೆದುಕೊಳ್ಳಬೇಕು') ಎಂದು *ಭಗವದ್ಗೀತೆ*ಯೂ,

**'ತಮಾರಾಧ್ಯ ಗುರುಂ ಭಕ್ತ್ಯಾ ಪ್ರಹ್ವ-ಪ್ರಶ್ರಮ-ಸೇವನೈಃ । ಪ್ರಸನ್ನೇ ತಮನುಪ್ರಾಪ್ಯ ಪೃಚ್ಛೇಜ್ಞಾತವ್ಯಮಾತ್ಮನಃ'** ('ಅಂಥ ಗುರುವನ್ನು ಭಕ್ತಿಯಿಂದ ಆರಾಧಿಸಿ, ನಮ್ರತೆ, ವಿನಯ, ಸೇವೆ ಇವುಗಳಿಂದ ಪ್ರಸನ್ನನಾದ ಅವನ ಬಳಿ ತಾನು ತಿಳಿಯಬೇಕೆಂದಿರುವುದನ್ನು ಕುರಿತು ಪ್ರಶ್ನಿಸಬೇಕು') ಎಂದು *ವಿವೇಕಚೂಡಾಮಣಿಯೂ* (ಶ್ಲೋ.೩೪) ಹೇಳುತ್ತದೆ. ಯಾವುದೇ ಜ್ಞಾನವನ್ನು ಪಡೆಯುವಲ್ಲಿ ಅಹಂಕಾರ, ದರ್ಪ, ಅಭಿಮಾನಗಳು ಅಡ್ಡಿಯಾಗುತ್ತವೆ. ಯಾರು ತನ್ನ ಹೃದಯವನ್ನು ತೆರೆದು ವಿದ್ಯೆಯನ್ನು ಆದರಿಸುತ್ತಾನೋ, ಯಾವುದೇ ಹೊಸ ವಿಚಾರವನ್ನು ಸ್ವೀಕರಿಸಲು ಮುಕ್ತ ಮನಸ್ಸನ್ನು ಹೊಂದಿರುತ್ತಾನೋ ಅವನು ಮಾತ್ರ ವಿದ್ಯೆಗೆ ಅಧಿಕಾರಿ; ಅವನಿಗೆ ಗುರು ಎಲ್ಲವನ್ನೂ ಕಲಿಸುತ್ತಾನೆ. ಈ ಸತ್ಯ ನಮ್ಮ ದೇಶದ ಮಹಾನ್ ಗುರುಗಳಿಗೆ ಚೆನ್ನಾಗಿ ತಿಳಿದಿತ್ತು. ಲೌಕಿಕ ವಿದ್ಯೆಯನ್ನು **ನೋಡಿ** ಕಲಿಯಬಹುದು, **ಕೇಳಿ** ಕಲಿಯಬಹುದು; ಅನೇಕ ಸಲ ಸ್ವಪ್ರಯತ್ನದಿಂದ ಕಲಿಯಬಹುದು. ಆದರೆ ಆಧ್ಯಾತ್ಮಿಕ ವಿದ್ಯೆ ಹಾಗಲ್ಲ – ಪೂರ್ಣಜ್ಞಾನ ಪಡೆದ ಗುರುವಿನಿಂದ ಕಲಿತಲ್ಲದೆ ಅದನ್ನು ಪಡೆಯಲಾಗದು. ಆದ್ದರಿಂದ ಕಲಿಸುವ ಗುರು ಇಲ್ಲಿ ಅತ್ಯಂತ ಮುಖ್ಯ. ಅವನನ್ನು ಒಲಿಸದೆ ವಿದ್ಯೆಯನ್ನು ಪಡೆಯುವುದು ಅಸಾಧ್ಯ; ಆಧ್ಯಾತ್ಮಿಕ ಶಿಕ್ಷಣವು ವಿನಯ, ಅಹಂಕಾರಶೂನ್ಯತೆ, ಸೇವಾ ಮನೋಭಾವ, ಆತ್ಮ ಸಮರ್ಪಣೆ ಈ ಗುಣಗಳನ್ನೆಲ್ಲ ಪೂರ್ವಭಾವಿ ಸಿದ್ಧತೆ ಎಂದೇ ಭಾವಿಸುತ್ತದೆ. ಭಾರತದಲ್ಲಿ ಎಲ್ಲ ವಿದ್ಯೆಗಳೂ ಆಧ್ಯಾತ್ಮ ವಿದ್ಯೆಯನ್ನು ಅನುಸರಿಸಿ ಬೆಳೆದು ಬಂದವು. ಆದ್ದರಿಂದ ಅದೇ ಪ್ರಕಾರ ಆ ಎಲ್ಲ ಕ್ಷೇತ್ರಗಳಲ್ಲೂ ಗುರುಪರಂಪರೆ ಬೆಳೆದು ಬಂದಿರುವುದು ಅತ್ಯಂತ ಸಹಜವಾಗಿದೆ.

**ಗುರು-ಶಿಷ್ಯರ ನಡುವಿನ ದಿವ್ಯ ಸಂಬಂಧ : 'ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ'** ಎಂದು ಉಪನಿಷತ್ತು ಗುರು-ಶಿಷ್ಯರ ವೈಶಿಷ್ಟ್ಯವನ್ನು ಹೊಗಳುತ್ತದೆ *(ಕಠ, ೧.೨.೭)*. **ವಕ್ತಾ**, ಎಂದರೆ ವಿದ್ಯೆ ಕಲಿಸುವ ಗುರು ಆಶ್ಚರ್ಯಜನಕವೆಂಬಂತೆ ಸಮರ್ಥನಾದವನು; ಸರ್ವವಿದ್ಯಾಪಾರಂಗತನೂ ಪ್ರವೀಣನೂ ಆದವನು. ಶಿಷ್ಯನೂ ಅಷ್ಟೇ ಸಮರ್ಥನಿರಬೇಕು. ಗುರುವನ್ನೇ ಮೀರಿಸುವ ಪ್ರಚಂಡ ಬುದ್ಧಿಶಕ್ತಿ ಅವನಲ್ಲಿರಬೇಕು. ಅಂಥವನೇ **'ಕುಶಲ'** ಎನಿಸಿಕೊಳ್ಳುತ್ತಾನೆ. ಇಂಥ ಗುರು-ಶಿಷ್ಯರ ನಡುವಿನ ಸಂಬಂಧ ಹೇಗಿರುತ್ತದೆ? ಅದು ಅಲೌಕಿಕವೂ, ಜನ್ಮಜನ್ಮಾಂತರಗಳ ಸಂಬಂಧವೂ ಆಗಿರುತ್ತದೆ. ಶಿಷ್ಯನ ಬರವಿಗಾಗಿ ಗುರು ಕಾದಿರುತ್ತಾನೆ. ಯೋಗ್ಯ ಗುರುವಿಗಾಗಿ ಎಲ್ಲೆಲ್ಲೋ ಅರಸಿ, ಬಳಲಿ ಬೆಂಡಾದ ಶಿಷ್ಯನು ಕೊನೆಗೂ ತನ್ನ ಗುರುವನ್ನು ಕಂಡುಕೊಳ್ಳುತ್ತಾನೆ. 'ಲೋಕಹಿತವನ್ನೇ ಬಯಸುವ ವಸಂತ ಋತುವಿನಂತೆ ಸಂತರೂ ಮಹಾಂತರೂ' *(ವಿವೇಕಚೂಡಾಮಣಿ,* ಶ್ಲೋ.೩೭) ಆದ ಗುರುಗಳು ಶಿಷ್ಯನನ್ನು ಬರಮಾಡಿಕೊಳ್ಳುತ್ತಾರೆ. ಇದು ಸಹಸ್ರಾರು ವರ್ಷಗಳಿಂದ ನಮ್ಮಲ್ಲಿ ಬೆಳೆದು ಬಂದ ಗುರು-ಶಿಷ್ಯರ ಪರಂಪರೆಯ ರೀತಿ.

ಇದಕ್ಕೆ ಇತ್ತೀಚಿನ ಅತ್ಯುತ್ತಮ ಉದಾಹರಣೆ ಶ್ರೀ ರಾಮಕೃಷ್ಣ ಪರಮಹಂಸರು ಹಾಗೂ ಸ್ವಾಮಿ ವಿವೇಕಾನಂದರು. ಇವರಿಬ್ಬರ ನಡುವಿನ ಅಸಾಧಾರಣ, ಅಲೌಕಿಕ ಗುರು-ಶಿಷ್ಯ ಸಂಬಂಧದ ಕಥೆ ಜಗತ್ಪ್ರಸಿದ್ಧವಾದುದು. ಭಗವಂತನ ಸಾಕ್ಷಾತ್ಕಾರದ ಹಂಬಲದಿಂದ ನಾನಾ ವ್ಯಕ್ತಿಗಳನ್ನು ಕಂಡು, ನಾನಾ ಸ್ಥಳಗಳಲ್ಲೆಲ್ಲ ಅಲೆದಾಡಿ, ಕೊನೆಗೂ ಶ್ರೀರಾಮಕೃಷ್ಣರ ಬಳಿಗೆ ಬಂದ ನರೇಂದ್ರ. **"ಸ್ವಾಮಿ, ನೀವು ದೇವರನ್ನು ಕಂಡಿದ್ದೀರಾ?"** ಎಂಬುದು ನರೇಂದ್ರನ ನೇರ ಪ್ರಶ್ನೆ. ದೇವರನ್ನು ಕಾಣದ ವ್ಯಕ್ತಿಯಿಂದ ತಾನು ಏನನ್ನೂ ಕಲಿಯಲಾಗದು ಎಂಬುದು ಅವನ ವೈಜ್ಞಾನಿಕ ದೃಷ್ಟಿಕೋನ. ಆದರೆ ಶ್ರೀರಾಮಕೃಷ್ಣರ ಉತ್ತರವೂ ಅಷ್ಟೇ ಅದ್ಭುತ. **"ಹೌದು, ಕಂಡಿದ್ದೇನೆ. ನಿನ್ನನ್ನು ಕಾಣುವುದಕ್ಕಿಂತಲೂ ಹೆಚ್ಚು ಸ್ಪಷ್ಟವಾಗಿ ಕಂಡಿದ್ದೇನೆ"** ಎಂದರು ಶ್ರೀರಾಮಕೃಷ್ಣರು. ಎಂಥ ಗುರು, ಎಂಥ ಶಿಷ್ಯ! ವಿವೇಕಾನಂದರ ಆಗಮನಕ್ಕಾಗಿ ಬಹುಕಾಲದಿಂದ ಕಾದಿದ್ದ ಶ್ರೀರಾಮಕೃಷ್ಣರಿಗೆ ತನ್ನ ಪ್ರಿಯಶಿಷ್ಯ ಬಂದೊಡನೆ ಅತ್ಯಾನಂದವಾಯಿತಂತೆ. ದೈವೀಸಂಕಲ್ಪದಂತೆ ತನ್ನ ಕಾರ್ಯವನ್ನು ಮಾಡಲು ಸಪ್ತರ್ಷಿ ಮಂಡಲದಿಂದ ಬಂದ ಹುಡುಗನು ಇವನೇ ಎಂದವರು ಗುರುತಿಸಿದರು. ಆದರೆ ನರೇಂದ್ರನಿಗೆ ಶ್ರೀರಾಮಕೃಷ್ಣರೇ ತನ್ನ ಗುರುವೆಂದು ಸ್ವೀಕರಿಸಲು ತುಂಬಾ ಸಮಯ ಹಿಡಿಯಿತು. ಅನೇಕ ಪರೀಕ್ಷೆಗಳ ಮೂಲಕ ಅವನು ಶ್ರೀರಾಮಕೃಷ್ಣರೇ ತನ್ನ ಗುರುವೆಂಬುದನ್ನು ಕಂಡುಕೊಂಡ. ಇಂಥ ಅಪೂರ್ವ ಸಂಬಂಧ, ಅಪ್ರತಿಮ ಗುರು-ಶಿಷ್ಯರ ಸಮಾಗಮ ನಮ್ಮ ಪುರಾಣ, ಇತಿಹಾಸಗಳಲ್ಲೂ, ಚರಿತ್ರೆಯ ಪುಟಗಳಲ್ಲೂ ಅನೇಕ ಕಡೆ ಕಂಡು ಬರುತ್ತದೆ.

**ಆಧ್ಯಾತ್ಮಿಕ ಅನುಭವ ಮತ್ತು ಧನ್ಯತಾಭಾವ :** ಗುರುವನ್ನು ಕುರಿತು ಬರೆದಿರುವ ಸ್ತೋತ್ರ, ಸ್ತುತಿಗಳಲೆಲ್ಲ ಕಂಡುಬರುವ ಇನ್ನೊಂದು ಭಾವವೆಂದರೆ, ಆಧ್ಯಾತ್ಮಿಕ ಅನುಭೂತಿಯಿಂದ ಹೊರಹೊಮ್ಮುವ ಧನ್ಯತಾಭಾವ. ಅಜ್ಞಾನದ ಅಂಧಕಾರದಲ್ಲಿ ತೊಳಲಾಡುತ್ತಿದ್ದಷ್ಟು ಕಾಲವೂ ಶಿಷ್ಯನಿಗೆ ಜ್ಞಾನದ, ಸಾಕ್ಷಾತ್ಕಾರದ ಅತೀತ ಕಲ್ಪನೆ ಇರುವುದಿಲ್ಲ; ಅಂಥ ಅನುಭವವಾದೊಡನೆ ಅವನಿಗೆ ಪ್ರಪಂಚ ಅಲ್ಪವಾಗಿ ಗೋಚರಿಸುವುದು. ಭೌಮಾನುಭವದ ಮುಂದೆ ತನ್ನಲ್ಲಿದ್ದ ಅಜ್ಞಾನ ಎಷ್ಟೊಂದು ಕ್ಷುದ್ರವಾಗಿತ್ತೆಂದು ಹೋಲಿಸಿ ನೋಡಿ, ಗುರುವಿನ ಪರಮಕಾರುಣ್ಯದ ಮುಂದೆ ತನ್ನ ವ್ಯಕ್ತಿತ್ವ ಕುಬ್ಜವಾಗಿ ತೋರುವುದು. ಇದರಿಂದ ಕರಗಿ ಹೋಗುವ ಶಿಷ್ಯನ ಧನ್ಯತಾಭಾವ ಮೇರೆ ಮೀರಿದ್ದು; ಅವನ ವ್ಯಕ್ತಿತ್ವವನ್ನೆಲ್ಲ ತುಂಬಿ ತುಳುಕುವಂತಹುದು. ಈ ರೀತಿಯ ಭಾವದಿಂದ ಹೊರಹೊಮ್ಮಿದ ಶಿಷ್ಯನು ತನ್ನೆಲ್ಲವನ್ನೂ ಗುರುವಿಗೆ ಸಮರ್ಪಿಸಿಕೊಳ್ಳುತ್ತಾನೆ. **'ಗುರೋರಂಘ್ರಿಪದ್ಮೇ ಮನಶ್ಚೇನ್ನ ಲಗ್ನಂ ತತಃ ಕಿಂ, ತತಃ ಕಿಂ?'** (ಸದ್ಗುರುವಿನ ಪಾದಕಮಲಗಳಲ್ಲಿ ಮನಸ್ಸು ನಿಲ್ಲದೆ ಹೋದರೆ ಫಲವೇನು? ಫಲವೇನು?) ಎಂದು ಅವನು ಗುರುವಿನ ಪಾದಕ್ಕೆರಗಿ ಧನ್ಯನಾಗುತ್ತಾನೆ.

**ಇಷ್ಟದೇವತೆ-ಗುರು :** ಶ್ರೀರಾಮಕೃಷ್ಣರು ಗುರುವಿನ ಬಗ್ಗೆ ಹೇಳುತ್ತ ಹೀಗೆನ್ನುತ್ತಾರೆ: "ಇನ್ನೇನು, ಇಷ್ಟದೇವತೆಯ ದರ್ಶನವಾಗುತ್ತದೆ ಎನ್ನುವಾಗ ಗುರು ಕಾಣಿಸಿಕೊಂಡು ಸಾಧಕನಿಗೆ ಹೇಳುತ್ತಾನೆ, 'ನೋಡಲ್ಲಿ! ನಿನ್ನ ಇಷ್ಟದೇವರನ್ನು ನೋಡಲ್ಲಿ.' ಬಳಿಕ ಗುರು ಇಷ್ಟದೇವನಲ್ಲಿ ಲೀನನಾಗಿ ಬಿಡುತ್ತಾನೆ. ಯಾರು